
Azim Premji Foundation

Karnataka Field Institutes

# ಬಯಲು Bayalu

Issue No. 69

May 2018



...a space of our own

# ವಚನಾಮೃತ

“ ಕಳಬೇಡ, ಕೊಲಬೇಡ

ಹುಸಿಯ ನುಡಿಯಲು ಬೇಡ,

ತನ್ನ ಬಣ್ಣಿಸಬೇಡ,

ಇದಿರ ಹಳಿಯಲು ಬೇಡ,

ಅನ್ಯರಿಗೆ ಅಸಹ್ಯ ಪಡಬೇಡ,

ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ

ಇದೇ ನಮ್ಮ ಕೂಡಲಸಂಗಮದೇವನನೊಲಿಸುವ ಪರಿ.”

– ಬಸವಣ್ಣ



# ಪರಿವಿಡಿ


1. May Day and Basavanna (Article)……………………………………………..Peri

2. ನಮ್ಮಯ್ಯ ಬಸವಣ್ಣ (ಕವಿತೆ)/Basavanna- our Lord (Poem)………………..Ranganath C. N.

3. ವಿಶ್ವಗುರು ಬಸವಣ್ಣ–ದೃಷ್ಟಿಕೋನ ಮತ್ತು ಆಚರಣೆ (ಲೇಖನ) / Basavanna -The teacher of the world- Perspectives and Practice …………………………………………………………………………….Preethi S. Sindagi

4. ನವೋದಯದ ಹರಿಕಾರನಿಗೆ (ಕವಿತೆ)/ To the Harbinger of Navodaya (Poem)…..Raghavendra Herle G.

5. ವಚನ : ಜಿಜ್ಞಾಸೆ (ಲೇಖನ)/Vachana : An Exploration(Article)…………Maruthi D.

6. ನುಡಿಮುತ್ತು (ಕವಿತೆ)/Utterance (Poem)………………………………………….Dr. Showrish Kudkuli

7. Catching Fish (Article)…………………………………………………………Gowtham H. S.

8. ಎರಡು ಹನಿಗವಿತೆಗಳು (ಕವಿತೆ)/ Two Limericks(Poem)……………………..Naganand G. V.

9. ಶಿಕ್ಷಣದಲ್ಲಿ ಬಸವತತ್ವ (ಲೇಖನ)/Principle of Basavanna in Education (Article) ---Hanumantha Raju




# May day and Basavanna

**- Peri**

May day is the world labour day. This day we celebrate the success of the labour struggle. We all know that The poor, the labourers were treated very badly in this world. Physical work was looked down upon. People who were doing physical work were looked down and exploited. Labourers could not tolerate this for long and slowly they organized themselves and started fighting for their rights. This started first in the industrialized countries and spread to all the countries and then the world had to bow to the demands of the workers for a dignified life. The fight of the workers for a dignified life was not confined to just their wellbeing. It was a fight for justice, a fight for equality and a major fight for larger humane society. It is this success of the struggle that we are celebrating when we are celebrating the labour on the May day.

There was a time when I was thinking that this struggle was a very systematic organized and linear fight. Slowly, I understood that the reality is very far from this understanding. The fights have been many and varied. Some big, some small. Some organized, some spontaneous. Men, women, children, all have fought. Different communities have fought in different ways. One such struggle is led by Basavanna in 12th century. Basavanna was born in a Brahmin community in Karnataka state. Got really frustrated with the meaningless and exploitative traditions and customs of the society and started rebelling against it. Basavanna was able to attract many people who themselves were frustrated with this society. Together as a community they were able to restructure the fabric of the society.

Basavana's greatest achievement as I see is the organizing of the labourers at that stage. In 12th century, Baasavanna mobilizes and fights for the workers' rights. Basavanna builds a very strong class consciousness of workers. His class consciousness is so strong that he can transcend the caste barriers. He fights the caste system and works towards the annihilation of the caste system. He was very clear that in Indian society without destroying the caste system you cannot move an inch forward. Hence, he invited people from all the castes to join his group which he envisaged as a casteless community, a religion without caste. The workers go on strike and stop work and the documents have details of what a pathetic state of affairs the streets of Bijjala's kingdom is in. There are very few struggles of this nature in History at this stage. That is why this is a rare revolution. A revolution of the workers with class consciousness.



## *May day and Basavanna (Continued )*

Basavanna with the social consciousness, not only fights for workers' rights, but, he also works on the human spirituality. This combination of self and society is a deadly combination. It is building from both the sides inside and outside. Unlike other revolutions this movement is very humane and grounded in knowledge and spirituality. It appears that Basavanna was conscious of this gap, this lacunae. He works for the workers' rights and lifts work itself to another level when he says work is worship. There is a lot of work on self that happens. Ordinary people are able to transform themselves. Ordinary people are able to lift themselves with their understanding of this society and self. The reflection and the critique of these people on this society is commendable work. They avoided Sanskrit and started creating literature in their vernacular, their own language which became very close to the people and are popular to this day!

His greatest contribution was that he was able to create abundant space for the growth of the ordinary people who joined him. The transformation of the people is simply mind blowing. Cobbler, washer-man, boatman, potter, farmers . . . everyone became a Saint! That was the power of Basavanna. Was this workers revolution a success or a failure? Nobody can answer this in straight YES or NO. If we see how he was forced to leave the kingdom along with his followers, how he was tricked and killed, how everything collapsed immediately after his murder… or death, it is surely a failure. If after so many centuries his ideals are still living and there is a huge following. If his thoughts and philosophy has been alive all these years, we should definitely conclude that it is successful. Among the leaders of the world, he is the greatest leader who fought for the workers' rights and workers wellbeing.  Among the philosopher he is one of the philosopher who democratized spirituality to the core and grounded it in physical labour. When people in the labour movement were working for numbers, the scale, Basavanna worked on depth! He worked on each person's transformation, where this human transformation became a social movement! On this May Day I salute this great spiritual fighter who transformed the society of his time!



Azim Premji Foundation

# ನಮ್ಮಯ್ಯ ಬಸವಣ್ಣ

– ರಂಗನಾಥ್ ಸಿ.ಎನ್. ಮಂಡ್ಯ



ಬಂದಾನೋ ಬಂದಾನೋ ನಮ್ಮಯ್ಯ ಬಸವಣ್ಣ
ತಂದಾನೋ ತಂದಾನೋ ನಮಗೆಲ್ಲ ಬದುಕನ್ನ

ಅಂದು ಅವನು ಮಾಡಿದ ಕ್ರಾಂತಿ
ಇಂದು ನಮ್ಮೆಲ್ಲರ ಕನಸಿಗೆ ಸ್ಫೂರ್ತಿ
ಅವನಡೆದ ದಾರಿಯ ನಾವೆಲ್ಲರೂ ಕೂಡಿ
ಸಾಗಬೇಕಾಗಿದೆ ಇಂದು ಎಲ್ಲವನ್ನೂ ಮೀರಿ

ದೂಡಬೇಕು ಇಂದಿನ ರಾಜಕಾರಣವನ್ನ
ಸಾಕಾರಗೊಳಿಸ ಬೇಕು ಸಮತೆ ಸಮಾನತೆಯನ್ನ
ಕಾಯಕವ ಮರೆತಿರುವ ಕೆಟ್ಟ ಹುಳುಗಳ ದೂಡಿ
ಕಾಯಕವೇ ನಮ್ಮದೆಂಬ ಮನುಕುಲವ ಸೇರಿ

ಅನುಭವ ಮಂಟಪದ ಚರ್ಚಾಗೋಷ್ಠಿಗಳನು
ಮತ್ತೊಮ್ಮೆ ಮೊಗದೊಮ್ಮೆ ಮನದಲ್ಲಿ ಸ್ಮರಿಸಿ
ನಮ್ಮೆಲ್ಲರುದ್ಧಾರ ನಾವೇ ಮಾಡಬೇಕು
ನಮ್ಮತನವನ್ನು ಒಮ್ಮೆ ಮೆಲುಕಾಕಿ ನೋಡಬೇಕು

ನಾವೇನು ಸಾಮಾನ್ಯರೆ?
ಅಲ್ಲಮ, ಬಸವ, ಅಕ್ಕ, ಕನಕ, ಪುರಂದರ, ಷರೀಫ
ಹೀಗೆ ಎಲ್ಲರನ್ನೂ ಬೆಳೆಸಿದವರು, ಬೆಳೆಸುತ್ತಿರುವವರು.
ಇಂದು ನಾವೆಲ್ಲರೂ ಅವರಾಗಿ ಬದುಕಬೇಕು,
ಹೊಸ ಬದುಕ ಎಲ್ಲರಲ್ಲೂ ಕಾಣಬೇಕು.



# ವಿಶ್ವಗುರು ಬಸವಣ್ಣ–ದೃಷ್ಟಿಕೋನ ಮತ್ತು ಆಚರಣೆ

– ಪ್ರೀತಿ ಎಸ್. ಸಿಂದಗಿ

ಬಸವಣ್ಣನವರು ಇಂದಿನ ವಿಜಯಪುರದ ಬಸವನಬಾಗೇವಾಡಿಯಲ್ಲಿ (ಇಂಗಳೇಶ್ವರದಲ್ಲಿ) ಕ್ರಿ. ಶ. 1132ರ ಅಕ್ಷಯತೃತೀಯ ದಿನದಂದು ಎಪ್ರಿಲ್ 30ರಂದು ಜನಿಸಿದರು

ತಮ್ಮ 8ನೇ ವಯಸ್ಸಿನಲ್ಲಿಯೇ ನಡೆಯುತಿದ್ದ ಉಪನಯನ ಕಾರ್ಯಕ್ರಮವನ್ನು ವಿರೋಧಿಸಿ ಯಾವುದೇ ಅಂಧಶ್ರದ್ದೆ, ಜಡ ಸಂಪ್ರದಾಯಗಳನ್ನು ಒಪ್ಪದೇ ಸತ್ಯಾನ್ವೇಷಕರಾಗಿ ಹೆತ್ತವರನ್ನು, ಬಂಧು ಬಾಂಧವರನ್ನು ತೊರೆದು ವಿದ್ಯಾಕಾಂಕ್ಷಿಗಳಾಗಿ ಕೂಡಲ ಸಂಗಮ ಗುರುಕುಲಕ್ಕೆ ಬಂದು ವಿದ್ಯಾಭ್ಯಾಸ ನಡೆಸಿದರು.

ಜಗತ್ತು ಸೃಷ್ಟಿಕರ್ತನಿಂದ ಆಗಿದ್ದು ಆ ದೇವನನ್ನು ಲಿಂಗದೇವ ಎಂದು ಕರೆದು ನಿರಾಕರ ದೇವನಿಗೆ ಯಾವುದೇ ಮನುಷ್ಯ ಅಥವಾ ಪ್ರಾಣಿಗಳ ರೂಪ ನೀಡದೆ, ದೇವರ ಸಾಕಾರ ಕೃತಿ ಬ್ರಹ್ಮ, ಇದು ಗೋಲಾಕಾರದಲ್ಲಿದೆ ಎಂದರು. ಆದ್ದರಿಂದ ಲಿಂಗದೇವರನ್ನು ವಿಶ್ವಾಕಾರದಲ್ಲಿ ಪೊಜಿಸುವದು ಸರಿ ಎಂದು ಇಷ್ಟಲಿಂಗದ ಪರಿಕಲ್ಪನೆಯನ್ನು ಕೊಟ್ಟರು.

ಇಷ್ಟಲಿಂಗದೇವ ಜಾತಿ, ಧರ್ಮ, ಜನಾಂಗ, ವರ್ಣ, ಲಿಂಗ, ಭೇದವನ್ನು ಕಳೆದು ಶರಣರನ್ನಾಗಿ ಮಾಡುವ, ಸಾಧನವನ್ನಾಗಿ ಮಾಡುವ, ಲಾಂಛನವಾಗಬೇಕೆಂದು ಬಯಸಿದರು. 12ವರ್ಷದ ವಿದ್ಯಾಭ್ಯಾಸದ ನಂತರ ನವ ಸಮಾಜದ ನಿರ್ಮಾಣ ರೂಪರೇಖೆಯನ್ನು ತನ್ನ ಮನದಲ್ಲಿ ಹೊಂದಿ ಕಲ್ಯಾಣದ ಕಾರ್ಯಕ್ಷೇತ್ರವನ್ನು ಪ್ರವೇಶಿಸಿದರು. ಮಂಗಳಖೇಡದಲ್ಲಿ ಆಳ್ವಿಕೆ ಮಾಡುತಿದ್ದ ಕಳಚೂರಿಯ ಬಿಜ್ಜಳ ಅರಸನ ಆಸ್ಥಾನದಲ್ಲಿ ಮೊದಲಿಗೆ ಕರಣಿಕರಾಗಿ ನಂತರ ಭಂಡಾರಿಯಾಗಿ , ಪ್ರಧಾನ ಮಂತ್ರಿಯಾದ ಬಸವಣ್ಣ ಹಲವು ಜನಪರ ಕಾರ್ಯ ಕೈಗೊಂಡರು. ದೇವರು ಒಬ್ಬನೆ. ಅವನು ಎಲ್ಲರ ಮನದಲ್ಲಿ ನೆಲೆಸಿದ್ದಾನೆ. ಹೊರತು ಮಠ ಮಂದಿರಗಳಲ್ಲಿ ಅಲ್ಲ ಎಂದು ವಿಶ್ವಕ್ಕೆ ಸಾರಿದರು.

ಸೋದರ ಮಾವನ ಮಗಳನ್ನು ಹಾಗೂ ಬಿಜ್ಜಳನ ಸಹೋದರಿಯನ್ನು ಮದುವೆಯಾದರು. ಸಮಾಜಪರ ಕಾರ್ಯದಲ್ಲಿ ತಮ್ಮ ಹೆಚ್ಚಿನ ಸಮಯವನ್ನು ಕಳೆದರು. ಅನುಭವ ಮಂಟಪವನ್ನು ರಚಿಸಿ ಅಲ್ಲಿ ಧರ್ಮ ಪ್ರಚಾರವನ್ನು ಕೈಗೊಂಡರು. ಎಲ್ಲರ ಮನೆ ಮನಗಳ ಬಾಗಿಲಿಗೆ ಧರ್ಮಗಂಗೆಯನ್ನೇ ಹರಿಸಿದರು. ಎಲ್ಲ ವೃತ್ತಿಗಳು ಒಂದೇ, ಸ್ತ್ರೀ ಪುರುಷರು ಸಮಾನರು. ಪ್ರತಿಯೊಬ್ಬ ವ್ಯಕ್ತಿ ಕೆಲಸಮಾಡಿ ಜೀವನ ನಡೆಸಬೇಕು. ಸುಳ್ಳುಹೇಳುವುದು, ಮೋಸಮಾಡುವುದು, ವಂಚಿಸುವುದು, ಪ್ರಾಣಿಬಲಿ ಕೊಡುವುದು, ಪರಸ್ತ್ರೀ ವ್ಯಾಮೋಹ ಹೊಂದುವುದು,. ತಪ್ಪು ಎಂದರು. ಬಸವಣ್ಣ ಕಾಯಕ ತತ್ವ ಎತ್ತಿ ಹಿಡಿದರು. ಧಾರ್ಮಿಕ ಗೊಂದಲದಲ್ಲಿ ಇದ್ದ ಜನರಿಗೆ ಹಾಗೂ  ಪುರೋಹಿತ ಶಾಹಿವರ್ಗದಿಂದ ವಂಚನೆಗೆ ಒಳಗಾಗುತ್ತಿದ್ದ ಜನಕ್ಕೆ ಬಸವಣ್ಣವರ ಜೀವನ; ಸಿದ್ಧಾಂತ ಹೊಸ ಬೆಳಕನ್ನು ನೀಡಿತು . ತಮ್ಮ ವಿಚಾರಗಳನ್ನು ಹೇಳಲು ಸರಳ ಕನ್ನಡದ ವಚನಸಾಹಿತ್ಯವನ್ನು ಬಳಸಿಕೊಂಡರು. " ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಇದೇ ನಮ್ಮ ಕೂಡಲಸಂಗಮ ದೇವನೊಲಿಸುವ ಪರಿ" ಎಂಬ ವಚನದ ಆಶಯದಂತೆ  ತಮ್ಮಂತೆ ವಿಚಾರಧಾರೆ ಹೊಂದಿದ ಶರಣರ ಜೊತೆ ಸೇರಿ ಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪಿಸಿದರು. ಅದು ವಿಶ್ವಮಾನವ ಸಂದೇಶ ಮತ್ತು ವಿಚಾರಗಳ ಬಗೆಗೆ ಮುಕ್ತವಾಗಿ ಚರ್ಚಿಸುವ ವೇದಿಕೆಯಾಯಿತು.



## *ವಿಶ್ವಗುರು ಬಸವಣ್ಣ–ದೃಷ್ಟಿಕೋನ ಮತ್ತು ಆಚರಣೆ (ಮುಂದುವರಿದ ಭಾಗ)*

ಈ ಮಂಟಪದಲ್ಲಿ ಮಹಿಳೆಯರಿಗೂ ಸಮಾನ ಅವಕಾಶ ಇದ್ದಿದ್ದರಿಂದ ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮರಂತಹ ಹಲವು ಮಹಿಳೆಯರು ಬೆಳಕಿಗೆ ಬಂದರು. ಆದರೆ ಇದು ಸಂಪ್ರದಾಯವಾದಿಗಳಿಗೆ ಹಿಡಿಸಲಿಲ್ಲ. ಅಲ್ಲದೆ ಬಸವಣ್ಣನವರು ಬ್ರಾಹ್ಮಣನಾದ ಮಧುಅರಸನ ಮಗಳಾದ ಲಾವಣ್ಯಳಿಗೂ ಹಾಗೂ ಸಮಗಾರನಾದ ಹರಳಯ್ಯನ ಮಗ ಶೀಲವಂತನಿಗೂ ಮದುವೆ ಮಾಡಿಸಿದ್ದಕ್ಕಾಗಿ ಸಂಪ್ರದಾಯವಾದಿಗಳು ಸಿಡಿದೆದ್ದು ಬಿಜ್ಜಳ ಮಹಾರಾಜನಿಗೆ ಚಾಡಿಹೇಳಿ ಪ್ರಚೋದಿಸಿದರು. ಮಹಾರಾಜ ಬಸವಣ್ಣನವರಿಗೆ ಗಡಿಪಾರು ಶಿಕ್ಷೆ ವಿಧಿಸಿದನು. ಹಾಗಾಗಿ ಬಸವಣ್ಣವರು ಕಲ್ಯಾಣ ತೊರೆದು ನಡೆದರು. ಇತ್ತ ಕಲ್ಯಾಣದಲ್ಲಿ ಅಂತರ್ಜಾತಿ ವಿವಾಹ ಆಗಿದ್ದಕ್ಕಾಗಿ ಮಧುಅರಸ ಲಾವಣ್ಯ, ಹರಳಯ್ಯ ಶೀಲವಂತರಿಗೆ ಕಣ್ಣು ಕೀಳಿಸಿ ಆನೆಕಾಲುಗಳಿಂದ ತುಳಿಸಿ ಸಾಯಿಸಲಾಯಿತು ಈ ವಿಷಯ ತಿಳಿದು ಬಸವಣ್ಣ ತೀವ್ರ ನೊಂದುಕೊಂಡು ಕೂಡಲಸಂಗಮಕ್ಕೆ ತೆರಳಿ ನದಿ ಯಲ್ಲಿ 1167ರಲ್ಲಿ ಐಕ್ಯರಾದರು. ಇವರು ಕೇವಲ 62ವರ್ಷ 3ತಿಂಗಳು 2ದಿನಗಳು ಮಾತ್ರ ಬದುಕಿದ್ದರು. ಮಹಾನ್ ಸಾಧನೆಗಳ ಹರಿಕಾರ ಇವರು.

12ನೇ ಶತಮಾನದಲ್ಲಿ ಅವರು ಹೊತ್ತಿಸಿದ ಬೆಳಕು ಇಡೀ ವಿಶ್ವದ ತುಂಬೆಲ್ಲಾ ಹರಡಿತು. ಅನುಭವ ಮಂಟಪವನ್ನು ಜಗತ್ತಿನ ಮೊದಲ ಸಂಸತ್ತು ಎಂದು ಗುರುತಿಸಲಾಗುತ್ತಿದೆ. ಬುದ್ಧನ ನಂತರ ಅತಿದೊಡ್ಡ ಪ್ರಮಾಣದಲ್ಲಿ ಸಮಾನತೆಯನ್ನು ಸಾರಿದ 'ಹರಿಕಾರ. ಇವರ ತತ್ವಗಳು ಸ್ವತಂತ್ರಭಾರತದ ಸಂವಿಧಾನದ ಮುಖ್ಯ ಆಶಯಗಳಾಗಿವೆ. ತಮ್ಮ ವಚನಗಳಲ್ಲಿ 'ಕಾಯಕವೇ ಕೈಲಾಸ' , 'ದಯವೇ ಧರ್ಮದ ಮೂಲವಯ್ಯಾ' , 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎಂದು ಸಾರುವ ಮೂಲಕ ತಮ್ಮ ಮಾನವತಾವಾದಕ್ಕೆ ಸಾಹಿತ್ಯ ಸ್ಪರ್ಶ ನೀಡಿದರು . ಜಾತಿವಾದಿಗಳು ವಚನಸಾಹಿತ್ಯವನ್ನು ನಾಶಮಾಡಲು ಸನ್ನದರಾದಾಗ ವೀರಮಾತೆ ಅಕ್ಕ ನಾಗಲಾಂಬಿಕೆ, ಚೆನ್ನಯಿ, ಚನ್ನಬಸವಣ್ಣ, ವೀರಘನಾದ್ದಾರಿ ಮಡಿವಾಳ ಮಾಚಯ್ಯನವರು ವಿರಾಗ್ರಣಿಗಳಾಗಿ ಕಾದಾಡಿ ವಚನ ವಾಙ್ಮಯವನ್ನು ರಕ್ಷಿಸಿ ಉಳಿಸಿ ಕೊಟ್ಟರು. ಅಂತು ನಮ್ಮೆಲ್ಲರ ಅಂದರೆ ಇಡೀ ವಿಶ್ವದ ಹೆಮ್ಮೆಯ ವಚನ ಆಸ್ತಿಯಾಗಿ ಉಳಿಯಿತು .

ಇಂದು ಮಹಾನ್ ನೇತಾರರಾದ ಬಸವಣ್ಣನವರು ಲಿಂಗಾಯತ ಧರ್ಮ ಸಂಸ್ಥಾಪಕರು ಧರ್ಮಪಿತರು ಆಗಿದ್ದಾರೆ.

ಇವರ ಕೃತಿಗಳು ; 'ಷಟಸ್ಥಲ ವಚನ,' 'ಮಂತ್ರಗೊಪ್ಯೆ,' 'ಶಿಖಾರತ್ನವಚನ' ಎಂಬ ಗ್ರಂಥಗಳು.

ಇವರ ದೃಷ್ಟಿಕೋನ ಮತ್ತು ಆಚರಣೆಗಳು ಇಡೀ ವಿಶ್ವಕ್ಕೆ ಎಷ್ಟು ಮಾದರಿಯಾಗಿವೆ ಎಂದರೆ ಭಾಷೆ, ನಾಡು, ರಾಷ್ಟ್ರ, ಭೇದ ಮರೆತು ಇವರ ಜೀವನ ಚರಿತ್ರೆ, ವಚನಗಳು ಕನ್ನಡ, ತೆಲುಗು, ತಮಿಳು, ಹಿಂದಿ, ಇಂಗ್ಲಿಷ್, ಮರಾಠಿ, ಮುಂತಾದ ಭಾಷೆಗಳಲ್ಲಿ ಗ್ರಂಥಗಳ ರೂಪದಲ್ಲಿ ರಚನೆಯಾಗಿವೆ .



# ನವೋದಯದ ಹರಿಕಾರನಿಗೆ...

– ರಾಘವೇಂದ್ರ ಹೇರ್ಳೆ ಜಿ., ಬೆಂಗಳೂರು.



ಜಗದ ಬೆಳಕು ನೀನು,
ಹೊಸ ಮನ್ವಂತರದ ರೂವಾರಿ ನೀನು,
ಸರ್ವಸಮಾನ ಸಮಾಜ ನಿರ್ಮಾಣಕೆ ಟೊಂಕ ಕಟ್ಟಿ
ಕರ್ತಾರನ ಕಮ್ಮಟದಲ್ಲಿ ಬದುಕಿನರ್ಥಕೆ ಹೊಸಭಾಷ್ಯ ಬರೆದವನು ನೀನು,
ಕಾಯಕಯೋಗಿಯಾಗಿ ದುಡಿಮೆಯ ಮಂತ್ರವನರುಹಿದವ ನೀನು,
ವಚನಸುಧೆಯ ತಂಬೆಲರಲಿ ಲೋಕಸತ್ಯಗಳ ಸಾರಿದವ ನೀನು,
ನನಗಿದೋ ಅಭಿನಂದನೆ ; ಅಭಿವಂದನೆ !

ಅನುಭವ ಮಂಟಪದಲ್ಲಿ ವೈಚಾರಿಕತೆಯ ಚಾದರ ಹೊದ್ದು ಅನವರತ ಆಧ್ಯಾತ್ಮ
ಜಿಜ್ಞಾಸೆಗೈದೆ ನೀನು,
ಕೂಡಲಸಂಗನ ಚರಣಾರವಿಂದದಲಿ ಶರಣುಭಾವದ ಸುವರ್ಣಪುಷ್ಪ ನೀನು,
ಲೋಕದಂಕುಡೊಂಕಿಗೆ ಜೀವಚೈತನ್ಯ ಸ್ವರೂಪಿ ನೀನು,
ಇವನಾರವ ಇವನಾರವ ಇವನಮ್ಮವನೆಂದ ಸರ್ವೋದಯದ ಓಂಕಾರ ನೀನು,
ಜಾತಿವಿನಾಶದ ಬೀಜಬಿತ್ತಿ ಹೊಸಫಸಲು ತೆಗೆದವನು ನೀನು,
ನವೋದಯದ ಹರಿಕಾರನಾಗಿ ಜಗಜ್ಯೋತಿಯಾದೆ ನೀನು,
ನಿನಗಿದೋ ಅಭಿನಂದನೆ; ಅಭಿವಂದನೆ !

ಲೌಕಿಕದ ಜಂಜಡದೊಳಗೆ ಅಲೌಕಿಕದ ಸಂಜೀವನಿಯ ಹೊತ್ತು ತಂದವ ನೀನು,
ಯುಗದ ಶಿಲ್ಪಿಯಾಗಿ ಸಹಸ್ರ ಸಹಸ್ರ ವರ್ಷಗಳಾಚೆಗಿನ ದೂರದೃಷ್ಟಿ ನೀನು,
ಮನುಕುಲಕೆ ಶಾಂತಿಪಾಠದ ಮೊದಲ ನುಡಿ ಕಲಿಸಿದ ಲೋಕಶಿಕ್ಷಕ ನೀನು,
ಶಕ್ತಿವಿಶಿಷ್ಟಾದ್ವೈತ ಪಂಥದ ಅಡಿಗಲ್ಲು ನೀನು,
ಮೌಢ್ಯಗಳ ಸರಪಳಿಯ ಕಿತ್ತೊಗೆದು ವೈಚಾರಿಕತೆಯ ಹೊಂಬೆಳಕಾದೆ ನೀನು,
ಕ್ರಾಂತಿಯೋಗಿಯಾಗಿ ಮೌನಮುರಿದು ಜಾಡ್ಯಗಳ ಮೂಲೋತ್ಪಾಟನೆಗೆ ದೀಕ್ಷಾವಿಧಿಯಾದೆ ನೀನು,



**ನವೋದಯದ ಹರಿಕಾರನಿಗ,,,,, (ಮುಂದುವರಿದ ಭಾಗ)**

ಮನುಜಮತ–ವಿಶ್ವಪಥದ ಮೊದಲ ಹೆಜ್ಜೆ ನೀನು,
ಡಾಂಭಿಕತೆಯ ಪೊರೆ ಕಳಚಿ ನಿಜಭಕ್ತಿಯ ರೂಹಾದೆ ನೀನು,
ಕೊರಡು ಬಾಳಿನ ಮೇಲೆ ಜೀವಸೆಲೆಯ ಸಿಂಚನಗೈದ ಕಲ್ಪತರು ನೀನು,
ಸಮತೆ–ಸಮಾನತೆಗಳ ನಿಕಷಕ್ಕೊಡ್ಡಿ ಪುಟವಿಟ್ಟ ಬಂಗಾರವಾದೆ ನೀನು,
ಕಾರುಣ್ಯ ಸಿಂಧು ನೀನು ; ಅನಾಥ ಬಂಧುವು ನೀನು,
ಸ್ವಾರ್ಥದ ಸದ್ದಡಗಿಸಿ ಪರಹಿತಾಸಕ್ತಿಯ ಉದ್ಘೋಷದಲಿ ಉಲಿದ ಸಿಂಹನಾದ ನೀನು,
ನಿನಗಿದೋ ಅಭಿನಂದನೆ; ಅಭಿವಂದನೆ !

ಹಳೆನೀರು ಕೊಚ್ಚಿ ಹೋಗಿ ಹರಿದಿದೆ ಎಲ್ಲೆಲ್ಲೂ ಹೊಸನೀರು
ಪರ್ವಕಾಲದ ಹೊಸ್ತಿಲಲಿ ಈಗ ನಿನಗೊಂದಿಷ್ಟು ಪ್ರಶ್ನೆ :
ಹೇಳು ಹೇಳು ಬಸವಣ್ಣ ನೀ ಬಿತ್ತಿ ಹೋದ
ವೈಚಾರಿಕತೆಯ ಆಯುಧದ ಹರಿತ ಇಂದಿಗೂ ಹಾಗೆಯೇ ಉಳಿದಿದೆಯೇ ?
ಸಮಷ್ಟಿಯೊಳಗಿನ ಏಕತೆಯ ಬೇರು ದೃಢವಾಗಿ ನೆಲದಾಳಕ್ಕೆ ಇಳಿದಿದೆಯೇ ?
ನೀ ಕಲಿಸಿ ಹೋದ ವಚನಗಳ ಭಾವ ಹೃದಯದಲಿ ಸಾಮರಸ್ಯದನೊರತೆಯ ಚಿಮ್ಮುತಿದೆಯೇ ?
ಜನಮನದಲಿ ನೀ ಮೂಡಿಸಿದ ಅಸ್ಮಿತೆಯ ಹೊಳಪು ಒಂದಿನಿತೂ ಕಂದದೇ ಮಿನುಗುತ್ತಿದೆಯೇ ?
ನೀ ಸಾರಿದ ಸಾರ್ವಕಾಲಿಕ ಮೌಲ್ಯಗಳ ದೀಪ್ತಿ ಇಂದಿಗೂ ಪ್ರಖರವಾಗಿದೆಯೇ ?
ತನುಮನವ ಸಂತೈಸಿಕೊಂಡವರ ಜೀವನದೃಷ್ಟಿ ಈಗಲೂ ದಿಟ್ಟವಾಗಿದೆಯೇ ?
ಆಚಾರ–ಅನಾಚಾರಗಳ ತಕ್ಕಡಿಯ ಹಿಡಿತ ತೃಣಮಾತ್ರವೂ ತಪ್ಪಿಲ್ಲವೇ ?
ಹೇಗಿದೆ ಹೇಳು ನೀನಂದು ರಕ್ತ ಬಸಿದು ಕಟ್ಟಿದ ಪೂರ್ಣದೃಷ್ಟಿಯ ಸಮಾಜವೀಗ ?
ನಿನ್ನ ಉತ್ತರಕಾಗಿ ನಾನಾಗಿರುವೆ ಶಬರಿ,
ರಾಮನಾಗಬಲ್ಲೆಯಾ ನೀ ??????



Azim Premji Foundation

# ವಚನ : ಜಿಜ್ಞಾಸೆ

(ಸಾಮಾಜಿಕ ಮತ್ತು ಶೈಕ್ಷಣಿಕ ನೆಲೆಯಲ್ಲಿ)

– **ಮಾರುತಿ, ಡಿ.** ಮಂಡ್ಯ

ಬಸವಣ್ಣ ಮತ್ತು ಅಲ್ಲಮರ ಒಂದೊಂದು ವಚನವನ್ನು ಸಾಂದರ್ಭಿಕ ನೆಲೆಯಲ್ಲಿ ಅವುಗಳ ಜೊತೆ ಅನುಸಂಧಾನ ನಡೆಸಿ ಆ ವಿಚಾರಗಳನ್ನು ನಿಮ್ಮ ಜೊತೆ ಈ ಲೇಖನದಲ್ಲಿ ಮಾತನಾಡುವ ಪ್ರಯತ್ನ ಮಾಡಿದ್ದೇನೆ.

ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ರಾಜಕಾರಣದ ಸಂದರ್ಭವನ್ನು ಗಮನಿಸಿದಾಗ ಧರ್ಮ, ಜಾತಿ, ಅಭಿವೃದ್ಧಿ (ಅದು ಸುಸ್ಥಿರ ಅಭಿವೃದ್ಧಿ ಎಂಬುದರ ಮೇಲೆ ನನ್ನ ಅನುಮಾನವಿದೆ.) ಎಂಬ ವಿಚಾರಗಳು ಮುನ್ನೆಲೆಗೆ ಬಂದು ನೃತ್ಯ ಮಾಡುವುದನ್ನು ಗಮನಿಸಬಹುದು. ಅದರಲ್ಲೂ 'ದಲಿತಾಸ್ತ್ರ' ಎಂಬಂತೆ ದಲಿತರ ಮನೆಯಲ್ಲಿ ವಾಸ್ತವ್ಯ, ಊಟ ಮಾಡುವುದರ ಮೂಲಕ ಅದನ್ನು ಯುದ್ಧದ ಒಂದು ದಾಳವಾಗಿ ಬಳಸುವುದನ್ನು ಮತ್ತು ಅಂತಹವರನ್ನು ಆಧುನಿಕ ಚಾ–ಣುಕ್ಯ ಎಂಬ ವೈಭವೀಕರಣ ಮಾಡುವುದನ್ನು ಕಾಣಬಹುದು. ಇದನ್ನು ವಿಶ್ಲೇಷಕರು ಎರಡು ರೀತಿಯಲ್ಲಿ ನೋಡುವ ಪ್ರಯತ್ನ ಮಾಡಿದ್ದಾರೆ. ಮೊದಲನೆಯದಾಗಿ ಪ್ರಭುತ್ವದ ರೂವಾರಿಗಳು ದಲಿತರ ಮನೆಯಲ್ಲಿ ಊಟ ಮಾಡುವ, ವಾಸ್ತವ್ಯ ಮಾಡುವುದರಿಂದ ನಾವು ದಲಿತರನ್ನು ಉದ್ಧಾರ ಮಾಡುತ್ತೇವೆ, ಅಸ್ಪೃಶ್ಯತೆಯನ್ನು ಹೋಗಲಾಡಿಸುತ್ತೇವೆ. ನಿಮ್ಮ ಪರವಾಗಿ ಇದ್ದೇವೆ ಎಂಬ ಸಂದೇಶವನ್ನು ಕೊಡಲು ಸಹಕಾರಿಯಾಗುತ್ತದೆ ಎಂಬುದಾದರೆ, ಎರಡನೆಯದಾಗಿ ಈ ರೀತಿಯ ವರ್ತನೆಗಳು ದಲಿತರನ್ನು ಅವಮಾನಿಸುವ ಮತ್ತು ಈ ಅಸ್ಪೃಶ್ಯತೆಯನ್ನು ಜೀವಂತವಾಗಿಡುವ ಪ್ರಯತ್ನವಾಗಿದೆ. ಇಂತಹ ನಾಯಕರಿಗೆ ದಲಿತರ ಮನಸ್ಸಿನ ಒಳತೋಟಿಗಳ ಸೂಕ್ಷ್ಮತೆಯ ಅರಿವಿಲ್ಲ ಎಂದು ಹೇಳುವವರೂ ಇದ್ದಾರೆ.

ಈ ವಿಚಾರಕ್ಕೂ ಬಸವಣ್ಣನವರಿಗೂ ಏನು ಸಂಬಂಧ ಎಂದು ನಿಮ್ಮ ಮನಸ್ಸಿನಲ್ಲಿ ಪ್ರಶ್ನೆ ಮೂಡಬಹುದು. ನಾನು ಇಲ್ಲಿ ದೃಶ್ಯ ಮಾಧ್ಯಮಗಳು ಹೇಳುವ ಹಾಗೆ ಬ್ರೇಕ್‌ನ ನಂತರ ಎನ್ನುವುದಿಲ್ಲ; ಮುಂದುವರೆಸುತ್ತೇನೆ. ಬಸವಣ್ಣ ತಮ್ಮ ಬ್ರಾಹ್ಮಣ್ಯವನ್ನು ನಿರಾಕರಿಸಿದರೂ ಅಂದಿನ ರಾಜಷಾಹಿಯೊಂದಿಗೆ ಹೊಂದಿಕೊಂಡು ಬದುಕಬೇಕಾದ ಸಂದರ್ಭಗಳನ್ನು ಎದುರಿಸಬೇಕಾಯಿತು. ತಾನು ಹುಟ್ಟಿದ್ದು ಬ್ರಾಹ್ಮಣ ಸಮುದಾಯವಾದರೂ ತನ್ನ ತತ್ವ ಸಿದ್ಧಾಂತಗಳನ್ನು ತಳ ಸಮುದಾಯಗಳಿಗೆ ಮುಟ್ಟಿಸಿ, ಅವರಲ್ಲಿ ನವಚೈತನ್ಯ ತುಂಬಿ ಸಮತಾ ಸಮಾಜದ ನಿರ್ಮಾಣ ಮಾಡುವ ಕನಸನ್ನು ಕಂಡು ಅದನ್ನು ಸಾಕಾರ ಮಾಡಬೇಕಾಯಿತು. ಇಂತಹ ಸಂದರ್ಭದಲ್ಲಿ ಬಸವಣ್ಣ ಒಂದು ವಚನವನ್ನು ಕಟ್ಟಬೇಕಾಯಿತು. ಆ ವಚನ ಹೀಗಿದೆ:

**"ಚನ್ನಯ್ಯನ ಮನೆಯ ದಾಸಿಯ ಮಗನು**
**ಕಕ್ಕಯ್ಯನ ಮನೆಯ ದಾಸಿಯ ಮಗಳು**
**ಇವರಿಬ್ಬರು ಹೊಲದಲಿ ಬೆರಣಿಗೆ ಹೋಗಿ ಸಂಗವ**
**ಮಾಡಿದರು ಇವರಿಬ್ಬರಿಗೆ ಹುಟ್ಟಿದ ಮಗ ನಾನು**
**ಕೂಡಲಸಂಗಮದೇವ ಸಾಕ್ಷಿಯಾಗಿ"**

**ವಚನದ ಸರಳ ಅರ್ಥ :** ಮಾದರ ಸಮುದಾಯದ ಚನ್ನಯ್ಯನ ಮಗ, ಡೋಹರ ಸಮುದಾಯದ ಕಕ್ಕಯ್ಯನ ಮಗಳು ಇವರಿಬ್ಬರು ಬೆರಣಿಯನ್ನು ಸಂಗ್ರಹ ಮಾಡುವುದಕ್ಕೆ ಹೊಲಕ್ಕೆ ಹೋದ ಸಂದರ್ಭದಲ್ಲಿ ಸಂಗವ ಮಾಡಿದರು. ಇವರಿಬ್ಬರಿಗೆ ನಾನು ಹುಟ್ಟಿದೆ. ಇದಕ್ಕೆ ಕೂಡಲಸಂಗಮದೇವನೇ ಸಾಕ್ಷಿ.

ಮೇಲಿನ ವಚನವನ್ನು ನಾವು ಎರಡು ಆಯಾಮದಲ್ಲಿ ನೋಡುವ ಪ್ರಯತ್ನ ಮಾಡೋಣ. ಒಂದು; ಬಸವಣ್ಣನವರನ್ನು ಕೇಂದ್ರವಾಗಿ ಇಟ್ಟುಕೊಂಡು. ಎರಡು; ಡೋಹರ ಕಕ್ಕಯ್ಯನ ಮಗಳನ್ನು ಕೇಂದ್ರವಾಗಿ ಇಟ್ಟುಕೊಂಡು.
ಒಂದು: ಬಸವಣ್ಣನವರು ತಳಸಮುದಾಯಗಳ ಅದರಲ್ಲಿನ ಅಲಕ್ಷಿತ ಸಮುದಾಯಗಳ ಮಗ, ಮಗಳಿಗೆ ಹುಟ್ಟಿದವ ನಾನು ಎಂದು ಹೇಳುವ ಮೂಲಕ ಜಾತಿ ನಿರಾಕರಣೆ, ಬ್ರಾಹ್ಮಣ್ಯ ನಿರಾಕರಣೆ, ಅಸ್ಪೃಶ್ಯತೆ ನಿರಾಕರಣೆ ಮಾಡುವುದರ ಮೂಲಕ ಆ ಸಮುದಾಯಗಳಿಗೆ ದನಿ ನೀಡುವ, ಶಕ್ತಿ ನೀಡುವ ಪ್ರಯತ್ನ ಮಾಡುವುದನ್ನು ಕಾಣಬಹುದು.



**ಎರಡು:** ಮಾದರ ಮತ್ತು ಡೋಹರ ಎಂಬ ಭಿನ್ನ ತಳ ಸಮುದಾಯದ ಮಗ ಮತ್ತು ಮಗಳು ವಿವಾಹ ಪೂರ್ವ ಸಂಗ ಮಾಡಿದರು, ನಾನು ಹುಟ್ಟಿದೆ ಎಂಬ ಹೇಳಿಕೆ ಜಿಜ್ಞಾಸೆ ಮೂಡಿಸುತ್ತದೆ. ಇವತ್ತಿನ 21ನೇ ಶತಮಾನದ ಸಂದರ್ಭದಲ್ಲಿ ಮದುವೆಯಾಗದ ಹೆಣ್ಣುಮಗಳು ಮಗು ಹೆರುವುದು ಇರಲಿ, ಹುಡುಗನ ಜೊತೆ ಓಡಾಡುವುದನ್ನು ಕೆಟ್ಟ ದೃಷ್ಟಿಯಲ್ಲಿ ನೋಡುತ್ತ ಆ ಹೆಣ್ಣುಮಗಳ ಬಗ್ಗೆ ಇಲ್ಲಸಲ್ಲದ ಕುಹುಕ ಮಾತನಾಡುವುದನ್ನು ನಾವು ಗಮನಿಸುತ್ತೇವೆ. ಇನ್ನು 12ನೇ ಶತಮಾನದಲ್ಲಿ ಈ ಥರದ ಬಿಗಿಯಾದ ಜಾತಿಯ ಕ್ರೂರತೆ ಇನ್ನು ಹೆಚ್ಚಾಗಿರುವ ಸಂದರ್ಭವಿರುವುದನ್ನು  ವಚನ ವಾಙ್ಮಯದಲ್ಲೇ ಗುರುತಿಸುತ್ತೇವೆ. ಇಂತಹ ಸಂದರ್ಭದಲ್ಲಿ ಬಸವಣ್ಣನವರಿಗೆ ಡೋಹರ ಕಕ್ಕಯ್ಯನ ಮಗಳ ಮಾನಸಿಕ ಮನಸ್ಥಿತಿ ಅರ್ಥವಾಗಲಿಲ್ಲವೆ ? ತನ್ನ ಬ್ರಾಹ್ಮಣ್ಯ ನಿರಾಕರಣೆಗಾಗಿ ಕಕ್ಕಯ್ಯನ ಮಗಳನ್ನು ಸಾಮಾಜಿಕ ವೇದನೆಗೆ ಒಳಪಡಿಸುವುದು ಎಷ್ಟು ಸರಿ? ಬಸವಣ್ಣನವರಿಗೆ ಈ ಸಾಮಾಜಿಕ ಸೂಕ್ಷ್ಮ ಅರಿವಿಗೆ ಬರಲಿಲ್ಲವೇ? ಎಂದು ವಿಶ್ಲೇಷಣೆ ಮಾಡುವುದನ್ನು ಕಾಣಬಹುದು.

**ಅಲ್ಲಮನ** ಒಂದು ಪ್ರಸಿದ್ಧ ವಚನದ ಕಡೆ ಹೋಗೋಣ. ಅದು ನೇರವಾಗಿ ನಮ್ಮ ಶಿಕ್ಷಣ, ಶಿಕ್ಷಕ ಮತ್ತು ಮಕ್ಕಳಿಗೆ ಸಂಬಂಧಿಸಿದ್ದು.

**ಕೃತಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದನಯ್ಯಾ**
**ತ್ರೇತಾಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಯ್ದು ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದನಯ್ಯಾ**
**ದ್ವಾಪರದಲ್ಲಿ ಶ್ರೀ ಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದನಯ್ಯಾ**
**ಕಲಿಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದನಯ್ಯಾ**
**ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು**

ಈ ಮೇಲಿನ ವಚನಕ್ಕೆ ಸರಳ ನಿರೂಪಣೆಯ ಆವಶ್ಯಕತೆ ಇಲ್ಲ ಅಂದುಕೊಂಡಿದ್ದೇನೆ. ಇದನ್ನು ಎರಡು ಆಯಾಮದಲ್ಲಿ ನೋಡುವ ಪ್ರಯತ್ನ ಮಾಡಿದ್ದೇನೆ.

**ಮೊದಲನೆಯದಾಗಿ** ಗುರುವಿನ ಹಿನ್ನೆಲೆಯಲ್ಲಿ, ಸಾಂಪ್ರಾದಾಯಕ ಹಿನ್ನೆಲೆಯಲ್ಲಿ ನೋಡುವುದಾದರೆ ಶಿಷ್ಯ ಗುರುವಿಗೆ ವಿಧೇಯನಾಗಿರಬೇಕು, ಗೌರವಿಸಬೇಕು, ದಂಡಿಸಿಕೊಳ್ಳಬೇಕು ಎಂಬ ಮನಸ್ಥಿತಿ. ಕಾಲಗಳು(ಯುಗಗಳು) ಕಳೆದಂತೆ ಬದಲಾಗತೊಡಗಿದವು. ಶಿಷ್ಯ ಗುರುವಿಗೆ ವಿಧೇಯನಾಗಿರದೆ ಗುರುವೇ ಶಿಷ್ಯನಿಗೆ ವಿಧೇಯನಾಗಿ ಗೌರವಿಸಬೇಕಾದ ಸ್ಥಿತಿ ಎಂಬಲ್ಲಿಗೆ ಬಂದು ನಿಲ್ಲುತ್ತದೆ.

**ಎರಡನೇಯದಾಗಿ** ಶಿಷ್ಯನ ಹಿನ್ನೆಲೆಯಲ್ಲಿ ಸಂರಚನೆಯ ಹಿನ್ನೆಲೆಯಲ್ಲಿ ನೋಡುವುದಾದರೆ ಕಾಲಕಳೆದಂತೆ ಶಿಕ್ಷಣದ ಮಾದರಿಗಳು ಬದಲಾಗಿವೆ; ಬದಲಾಗುತ್ತ ಇರುತ್ತವೆ. ಹಾಗೆಯೇ ಇದೊಂದು ಚಲನಶೀಲ ಪ್ರಕ್ರಿಯೆ. ಅಂತೆಯೇ ಸಮಾಜವು ಬದಲಾಗುತ್ತಿರುವಂತೆ ಮಾನವ ಉತ್ಕೃಷ್ಟ ಮಟ್ಟಕ್ಕೆ (ಅಕಾಡೆಮಿಕ್ ಆಗಿ ಉತ್ಕೃಷ್ಟವಾಗಿರಬಹುದು. ಆದರೆ ಮಾನವೀಯ ಮೌಲ್ಯಾಧಾರಿತವಾಗಿ ಮನುಷ್ಯ ಉತ್ಕೃಷ್ಟನಾಗಿದ್ದಾನೆ ಎಂದು ಹೇಳುವಲ್ಲಿ ನನಗೆ ಧೈರ್ಯ ಸಾಲದು.) ವಿಕಾಸ ಹೊಂದಿದ್ದಾನೆ. ಅವನ ಮೆದುಳು ವಿಕಸನ ಹೊಂದಿದೆ, ಹೊಂದುತ್ತಲೂ ಇದೆ. ಹಾಗೆಯೇ ಕಲಿಕೆಗೆ ಅನೇಕ ಮಾದರಿಗಳು, ಅವಕಾಶಗಳು ಸಿಗುತ್ತಿವೆ. ಆದ್ದರಿಂದ ಕಾಲದಿಂದ ಕಾಲಕ್ಕೆ ಶೈಕ್ಷಣಿಕ ವ್ಯವಸ್ಥೆಯಲ್ಲಿ ಮಕ್ಕಳು ತಮ್ಮ ಗುರುಗಳಿಗಿಂತ ಜ್ಞಾನದಲ್ಲಿ ಕಲಿಕೆಯಲ್ಲಿ ಮುಂದಿದ್ದಾರೆ, ವಿಭಿನ್ನವಾಗಿ ಆಲೋಚಿಸುತ್ತಾರೆ. ಆ ಕಾರಣಕ್ಕಾಗಿ ಕಲಿಯುಗದ ಶ್ರೀಗುರು, ಕಲಿಯುಗದ ಶಿಷ್ಯನಿಗೆ ವಂದಿಸಿ ಕಲಿಕೆಯನ್ನು ಅನುಕೂಲಿಸುತ್ತಾನೆ. ಇಲ್ಲಿ ಶ್ರೀಗುರುವು ಶಿಷ್ಯನ ದೇಹಕ್ಕೆ ನಮಸ್ಕರಿಸುವುದಲ್ಲ,  ಬದಲಿಗೆ ಶಿಷ್ಯನಲ್ಲಿ ಇರುವ ಅಪಾರ ಜ್ಞಾನಕ್ಕೆ ನಮಸ್ಕರಿಸಿ ಪೋಷಿಸುವುದನ್ನು ಕಾಣಬಹುದು.



ಹೀಗೆ 12ನೇ ಶತಮಾನದ ಅಲ್ಲಮನ ವಚನವನ್ನು ಇವತ್ತಿನ ಸಂದರ್ಭದಲ್ಲಿ ಇಟ್ಟು ವಿಶ್ಲೇಷಣೆ ಮಾಡುವ ಅಗತ್ಯ ಇದೆ. ಹೀಗೆ ಒಂದು ವಚನವನ್ನು ಉದಾಹರಣೆಯಾಗಿ ಎರಡು ಆಯಾಮದಲ್ಲಿ ನೋಡುವ ಪ್ರಯತ್ನ ಇದು. ಇನ್ನೂ ವಿಭಿನ್ನ ಆಯಾಮದಲ್ಲಿ ಆಲೋಚಿಸಿದರೂ ಸಹ ಈ ವಚನಗಳು ನಮ್ಮೊಂದಿಗೆ ಮಾತನಾಡುತ್ತ ಹೋಗುತ್ತವೆ.

ಒಟ್ಟಾರೆಯಾಗಿ ಬಸವಣ್ಣನವರು ತನ್ನ ವಚನ ಮತ್ತು ಕೃತಿಯ ಮೂಲಕ ಅಂದಿನ ಸಮಾಜಕ್ಕೆ ಸಾಮಾಜಿಕ ತಿಳಿವಳಿಕೆಯನ್ನು ಕೊಟ್ಟರು. ಅವು ಇಂದಿಗೂ ಪ್ರಸ್ತುತವಾಗುತ್ತವೆ. ಹಾಗೆ ಅಲ್ಲಮನ ವಚನಗಳಂತೂ ಬೆಡಗಿನವುಗಳಿಂದ (ನಾನಾರ್ಥ) ಕೂಡಿದ್ದು, ಅವು ನಮ್ಮೊಳಗೆ ಹೊಸ /ವಿಭಿನ್ನ ಆಲೋಚನೆ, ಹೊಳಹು, ಚಿಂತನೆ ಮೂಡಿಸುವಲ್ಲಿ ಸಹಕಾರಿಯಾಗುತ್ತವೆ. ಆ ಕಾರಣದಿಂದ ಇಂತಹ ದಾರ್ಶನಿಕರ ವಚನಗಳ ಜೊತೆ ನಾವು ದಿನನಿತ್ಯ ವಾಕಿಂಗ್ ಮಾಡಿದರೆ ನಮ್ಮ ಮೆದುಳು, ಮನಸ್ಸುಗಳು ವಿಕಸನವಾಗುತ್ತವೆ ಎಂಬುದು ನನ್ನ ಭಾವನೆ.

# ನುಡಿಮುತ್ತು

**-ಡಾ. ಶೌರೀಶ್ ಕುದ್ಕುಳಿ, ಬೆಂಗಳೂರು.**

ಆ ದಿನ! ಸುದಿನ, ಸುದಿನ
ಮಾನವ ಜೀವಿಗಳ ಬೌದ್ಧಿಕ
ಸಮ್ಮಿಲನದ ದಿನ.

ಅ0ದಿನ ಅದೇ ಸೂರು, ಅದೇ ಗಿಡಮರ,
ಗಿಡಗಳ ನಡುವಿನ ಹಕ್ಕಿಗಳ ಕಲರವದ ಅದೇ
ಸ0ಗೀತ

ನೆನಪು ನೆನಪು ಆಹಾ! ಆ ನುಡಿಮುತ್ತಿನ
ನೆನಪು ಅದೇ ಜೀವನದ
ಸಿಹಿಮುತ್ತು.

ಎಲೋ ಮಾನವನೇ ನೀ ಎಲ್ಲಾದರೂ ಇರು
ಎ0ತಾದರೂ ಇರು ಆದರೆ ನೀ
ಎಲ್ಲವನಾಗಿರು!

ವಿಷ0ುಗಳ ವಿಜ0ು ಪತಾಕೆಗಳ
ನಾಡಿನಳೊ0ದು ಜೀವನದ ಗುರಿ0ು
ದಾರಿ0ುನು ಹುಡುಕುತಿರು

ಮನಸೇ ತಿಳಿ ಇವರೆಲ್ಲರೂ
ನನ್ನವರೇ ನನ್ನ ಸಹೃದ0ುಗಳೇ,
ನನ್ನ ಸ್ನೇಹಿತರೇ.

ಚೆನ್ನದ ಹೊಳಪನ್ನು ಸೂಸುವ
ಪ್ರತಿಬಿ0ಬವೇ ಜೀವನ:
ಆ ಪ್ರತಿಬಿ0ಬವೇ ಜೀವನದ ಗುರಿ.



## *Catching fishes*

***-Gowtham H S, Yadagir***

This event was took over when I am studying in 6th standard in the core malnad region of koppa taluk, at the place Narve. I was an elder person among three brothers who plan to catch fishes from the live stream not to eat but to pet those. So i planned an event to exhibit after our semester exams. Finally we completed our all exams and for these events usually our parents do prohibition, so we without getting to their presence we did it. Usually our parents prefer to rest at afternoon and this time was found very best for us. We took only a single water bottle and gone towards the stream and stream was also very thinner. After going to it we came to know that we could have brought small nets or clothes, but we start scolding and each other for not bringing those. Than we start to catch fishes by bare hands, you could have imagined that situation. Without the absence of the world we get into action. We didn't concentrated on time which was not a matter at that time. The action gone through until evening without any earning. Then a person who work in my house came towards me and said your father is looking over you through entire village. Than at the meantime we found a person who was coming from a mile towards us but we didn't concentrated much on him. But when he came nearby we realized him as our father. Then we gave work for our legs, through an alternative way we returned to our house but it was a bad day! it was also got locked by mother at front door, who went present through backdoor without coming to our presence. Our heart plundered ruthlessly, father is coming and front door locked..! But he didn't came towards us instead he also gone through backdoors. We also inspected backdoor before but it was also locked. Then we simply awaited, finally I heard a sound of a vessel from inside. Finally we came to know that we are in a trap then after an hour they opened all doors without a single word.





# ಎರಡು ಹನಿಗವಿತೆಗಳು.

– ನಾಗಾನಂದ್ ಜಿ. ವಿ.



## ಎದ್ದೆ...

ರಾತ್ರಿ ತಳೆದೆದ್ದೆ, ಬುದ್ಧನ ಪ್ರತಿಸ್ಪರ್ಧಿಯಾಗಲ್ಲ,
ಆಸೆ ತೊರೆಯಬೇಕು ಎಂಬ ಹಠದಿಂದಲ್ಲ,
ಅಹಿಂಸೆ ನನ್ನ ಮಂತ್ರವಾಗಬೇಕೆಂಬ
ಹಪಾಹಪಿಯಿಂದಲ್ಲ,
ತ್ಯಜಿಸಿ ತ್ಯಾಗಮಯಿಯಾಗಬೇಕೆಂದಲ್ಲ,
ಹೋಯ್, ಥೂ ಸೊಳ್ಳೆ ಮಾರ್ರೆ!!!

## ಪದೋನ್ನತಿ

ಅವಿವಾಹಿತ ಪ್ರೇಮ ಕವಿಯ ಪದ
ಪುಂಜವೇ ಒಂದು ಅಚ್ಚರಿ !

ಚಂದ್ರ ಕಾಂತೆ, ಮೋಹದರಗಿಣಿ, ತರು,
ಲತೆ, ಕಾಯಿ, ಹೂವು, ಹಣ್ಣು ಅಬ್ಬಾ!

ಎಲ್ಲೋ ತಪ್ಪಿ ಮದುವೆಯಾಯಿತು ಛೇ!

ಕಾಲಚಕ್ರದಲಿ, ಪೈಶಾಚಿಕ, ಘನಘೋರ,
ಭೀಭತ್ಸ, ರಾಕ್ಷಸ, ಭೂತ, ಭೇತಾಳ ಅಯ್ಯೋ!!!



# ಶಿಕ್ಷಣದಲ್ಲಿ ಬಸವತತ್ವ

– ಹನುಮಂತರಾಜು, ಬೆಂಗಳೂರು.

ಸಾಮಾಜಿಕ ವ್ಯವಸ್ಥೆಯ ನಡುವೆ ಬದುಕುವ ನಾವು ಇಂದು ಸಮಾಜದಲ್ಲಿ ಘಟಿಸುತ್ತಿರುವ ಎಲ್ಲಾ ಆಗು ಹೋಗುಗಳಿಗೆ ಜವಾಬ್ದಾರರಾಗಿದ್ದೇವೆ. ಏಕೆಂದರೆ ಸಾಮಾಜಿಕ ಬೆಳವಣಿಗೆಯ ಕೇಂದ್ರ ಬಿಂದುವಿನಲ್ಲಿ ಚಲಿಸುವ ಶಿಕ್ಷಣವೂ ಮಾನವೋದ್ಧಾರದ ಪ್ರತೀಕವಾಗಿದೆ. ಶೈಕ್ಷಣಿಕ ವಲಯವನ್ನು ವೈಜ್ಞಾನಿಕ ಮನೋಭಾವನೆಯ ವ್ಯಾಪ್ತಿಗೆ ಒಳಪಡಿಸಬೇಕಾಗಿದೆ. ಇದು ಎಲ್ಲಾ ವಿಷಯ ಬೋಧನೆಯ ತರಗತಿಗೆ ಹೆಚ್ಚು ವ್ಯಾಪಿಸಬೇಕಾಗಿದೆ. ಪುಸ್ತಕ ಸಂಸ್ಕೃತಿಯ ಪ್ರತಿಬಿಂಬಕ್ಕೆ ಸಮೀಪವಾಗಿರುವ ಶಾಲೆಗಳು ಮಗುವಿನ ಮನಸನ್ನು ಅರಳಿಸುವ ಹೂದೋಟಗಳಾಗಿ ಕಾರ್ಯನಿರ್ವಹಿಸುತ್ತಿವೆ. ಒಂದೇ ವರ್ಗ, ಜಾತಿ, ಧರ್ಮದ ಹಿನ್ನೆಲೆಯಲ್ಲಿ ನಾಲ್ಕು ಗೋಡೆಯಿಂದ ಆವರಿಸಿರುವ ಶಾಲಾ ಕೊಠಡಿಯನ್ನು ನೋಡಲು ಸಾಧ್ಯವಿಲ್ಲ. ನಾವು ಬದುಕುತ್ತಿರುವುದು ಸಂವಿಧಾನಬದ್ಧ ಜಾತ್ಯತೀತ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ. ಇಲ್ಲಿ ಎಲ್ಲರಿಗೂ ಮುಕ್ತವಾದ ಅವಕಾಶಗಳಿವೆ.

ಹನ್ನೆರಡನೆಯ ಶತಮಾನದಲ್ಲಿ ಉಂಟಾದ ವೈಚಾರಿಕ ಕ್ರಾಂತಿಯು ಮನುಕುಲವನ್ನು ಮೌಢ್ಯದ ನಿದ್ರೆಯಿಂದ ಎಚ್ಚರಿಸಿ ಆತ್ಮ ವಿಮರ್ಶೆ ಮಾಡಿಕೊಂಡು ತನ್ನತನವನ್ನು ಅರ್ಥಮಾಡಿಕೊಳ್ಳುವಂತೆ ಸಾರಿ ಹೇಳಿತು. ಮಾನವೀಯ ಮೌಲ್ಯದ ಕಡೆಗೆ ಎಚ್ಚರಿಸಿದ ಶರಣ ಸಂಸ್ಕೃತಿಯು, ಜಾತಿ, ದಾಸ್ಯ, ವರ್ಣ, ಮೌಢ್ಯ ಮುಂತಾದ ಕಪ್ಪುಚುಕ್ಕೆಗಳನ್ನು ಎತ್ತಿ ತೋರಿಸಿ ಮನುಕುಲವನ್ನು ಚಿಂತನಶೀಲ ಪ್ರವೃತ್ತಿಯ ಕಡೆಗೆ ಕರೆದುಕೊಂಡು ಹೋಗಿ ಅನುಭವ ಮಂಟಪದ ಕೆಳಗಡೆ ಕೂರಿಸಿಕೊಂಡಿತು. ನಿತ್ಯ ಜೀವನದ ಅನುಭವಗಳ ಚಿಂತನೆಗೆ ಬಸವಣ್ಣ ವೈಚಾರಿಕತೆಯನ್ನು ಬೆರೆಸಿ ಆತ್ಮ ವಿಮರ್ಶೆಯ ಜೊತೆಗೆ ಚರ್ಚೆಗೆ ಅವಕಾಶಗಳನ್ನು ಒದಗಿಸಿದರು. ಆರೋಗ್ಯಕರವಾದ ಚರ್ಚೆಯಲ್ಲಿ ಭಾಗಿಯಾದ ಅಲ್ಲಮ, ಅಕ್ಕಮಹಾದೇವಿ, ಸಿದ್ಧರಾಮ, ಮಾದಿಗರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮುಂತಾದ ಶರಣರು ಸಮಾನ ಮನಸ್ಕರಾಗಿ ಎಲ್ಲರ ಚಿಂತನೆಗಳನ್ನು ಆಲಿಸಿ ಪ್ರತಿಕ್ರಿಯಿಸುತ್ತಿದ್ದರು. ಇಲ್ಲಿ ಆಯ್ಕೆಮಾಡಿಕೊಳ್ಳುತ್ತಿದ್ದ ವಿಷಯಗಳು ಆಗಿನ ಪ್ರಚಲಿತ ಸನ್ನಿವೇಶಗಳಾಗಿದ್ದವು. ಒಂದೊಂದು ವಿಷಯವನ್ನು ಒರೆಹಚ್ಚಿ, ತಿದ್ದಿತೀಡಿ ನೋಡಲಾಗುತ್ತಿತ್ತು.

**ತರಗತಿ ಮತ್ತು ಅನುಭವ ಮಂಟಪ:** ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಾಲೆಯನ್ನು ಒಂದು ಪುಟ್ಟ ಸಮಾಜವೆಂದು ಪರಿಗಣಿಸಲಾಗಿದೆ. ಈ ಪುಟ್ಟ ಸಮಾಜದಲ್ಲಿ ಅನುಭವ ಮಂಟಪದ ಒಳಗಿನ ಪರಿಧಿಗೆ ಒಳಪಡುವ ಎಲ್ಲಾ ರೀತಿಯ ಮಕ್ಕಳು ನಮಗೆ ಕಾಣಸಿಗುತ್ತಾರೆ. ಮಕ್ಕಳ ಕಲಿಕೆಗೆ ಪಠ್ಯ ಪುಸ್ತಕ, ಪಠ್ಯಕ್ಕೆ ಪೂರಕವಾದ ಕಲಿಕೆಯ ಸಾಮಗ್ರಿಗಳ ಬಳಕೆ ಇವುಗಳನ್ನು ಪಾಠದ ಜೊತೆಯಲ್ಲಿ ಕೊಂಡೊಯ್ಯುವ ವಿಧಾನಾತ್ಮಕ ಬೋಧನ ಕಲಿಕೆಯ ಪ್ರಕ್ರಿಯೆಯನ್ನು ಕಾಣುತ್ತೇವೆ. ಕಲಿಕೆಯ ಪ್ರಕ್ರಿಯೆಯಲ್ಲಿ ಮಗುವಿನ ವಿಶಾಲಾತ್ಮಕ ಬೆಳವಣಿಗೆಗೆ ಅವಕಾಶಗಳನ್ನು ಸೃಷ್ಟಿಸುವ ಕೆಲಸವು ಬೋಧನೆಯ ಜೊತೆಗೆ ನಡೆಯಬೇಕಾಗಿದೆ. ಇದರಲ್ಲಿ ಮಗುವಿನ ಮುಕ್ತ ಅಭಿವ್ಯಕ್ತಿಗೆ ಕೈಗೊಳ್ಳುವ ಚಟುವಟಿಕೆಗಳು ಚಿಂತನಶೀಲ ಅಭಿವ್ಯಕ್ತಿಗೆ ದಾರಿದೀಪವಾಗಬೇಕು. ಸಮಾಜದಲ್ಲಿರುವ ಆಗು ಹೋಗುಗಳನ್ನು ವಿಶ್ಲೇಷಿಸುವ ಪರಿಧಿಗೆ ಮಕ್ಕಳನ್ನು ಕರೆತರಬೇಕಾಗಿದೆ.

ಅನುಭವ ಮಂಟಪದ ಸನ್ನಿವೇಶಗಳನ್ನು ತರಗತಿಯಲ್ಲಿ ನಿರ್ಮಿಸಿ ಪ್ರತಿ ಸನ್ನಿವೇಶ ಹಾಗೂ ವಿಷಯಗಳನ್ನು ಗುರುತಿಸಿಕೊಂಡು ಅವುಗಳ ಬಹಿರಂಗ ಚರ್ಚೆಯನ್ನು ತರಗತಿಯಲ್ಲಿ ಕೈಗೊಳ್ಳುವುದರಿಂದ ಮಕ್ಕಳ ಮಾನಸಿಕ ವಿಕಾಸಕ್ಕೆ ಸಹಾಯಕವಾಗುತ್ತದೆ. ಒಂದು ಪ್ರಾಯೋಗಿಕ ಉದಾಹರಣೆಯನ್ನು ಹಂಚಿಕೊಳ್ಳುವುದಾದರೆ ಲಿಂಗ ಸಮಾನತೆಯ ಕುರಿತು ಮಾತನಾಡುವಾಗ ಕೇವಲ ಪುಸ್ತಕದಲ್ಲಿರುವ ವಿಷಯವನ್ನು ಓದಿ ಹಂಚಿಕೊಳ್ಳುವ ವಿಧಾನಕ್ಕಿಂತ ನೈಜ ಸನ್ನಿವೇಶಗಳನ್ನು ತರಗತಿಯ ಒಳಗೆ ತೆಗೆದುಕೊಂಡು ಬಂದಾಗ ಅವುಗಳ ಪೂರ್ಣ ವಿಷಯವನ್ನು ತಿಳಿಸಿ ಚರ್ಚಾ ಮಂಟಪವನ್ನು ವಿದ್ಯಾರ್ಥಿಗಳಿಗೆ ಹಾಕಿ ಕೊಟ್ಟಾಗ ಪ್ರಸ್ತುತ ಸನ್ನಿವೇಶಕ್ಕೆ ವಿಷಯವನ್ನು ಕೊಂಡಿಯಾಗಿ ಬಳಸಿಕೊಳ್ಳಬಹುದಾಗಿದೆ.



Azim Premji Foundation

## ಶಿಕ್ಷಣದಲ್ಲಿ ಬಸವತತ್ವ (ಮುಂದುವರಿದ ಭಾಗ)

ಈ ಚಿತ್ರಣವನ್ನು ತರಗತಿಯಲ್ಲಿ ನೋಡಿದಾಗ ಈಗಲೂ ಕೂಡ ನನಗೆ ನಿಜ ಶರಣೆ ಅಕ್ಕಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಸೂಳೆ ಸಂಕವ್ವ ನೆನಪಾಗುತ್ತಾರೆ. ಶರಣರ ಸಮ್ಮುಖದಲ್ಲಿ ತೋರಿದ ಅಕ್ಕನ ಗಟ್ಟಿತನ, ಗಂಡನಿಗೆ ಸರಿಸಮಾನವಾದ ಲಕ್ಕಮ್ಮನ ದಾಸೋಹ ಚಿಂತನೆ ಇವುಗಳು ಪ್ರಸ್ತುತದಲ್ಲಿ ಲಿಂಗ ಸಮಾನತೆಯ ಕುರಿತು ಮಾತನಾಡುವಾಗ ಹೆಚ್ಚು ನೆನಪಾಗುತ್ತವೆ.

ಧಾರ್ಮಿಕತೆ, ಜಾತೀಯತೆಯನ್ನು ಕುರಿತು ಮಾತನಾಡುವಾಗ ಅಣ್ಣ ಬಸವಣ್ಣನ ಲೌಕಿಕ ಅನುಭವಾತ್ಮಕ ಚಿಂತನೆಗಳು ಈಗಿನ ಹೊಸ ಧರ್ಮ ಕಟ್ಟುವ ಕಾಯಕದಲ್ಲಿ ನಿರತರಾಗಿರುವ ಮೌಢ್ಯ ಮನುಜರಿಗೆ ಬಸವಣ್ಣನ ಚಿಂತನೆಗಳನ್ನು ಸಂಪೂರ್ಣವಾಗಿ ಓದಿಕೊಂಡಾಗ ಅರಿವಾಗಬಹುದು. ಜಾತಿ, ಮೌಢ್ಯದ ಕುರಿತು ಧನಿ ಎತ್ತಿದವರನ್ನೇ ಕಾಲ ಸರಿದಂತೆ ಧಾರ್ಮಿಕ ದೇವರನ್ನಾಗಿ ಮಾಡಿ ಪೂಜೆಗೆ ಹಣ್ಣು ಕಾಯಿ ಸಿದ್ಧ ಮಾಡುತ್ತಾರೆ. ಶಾಲೆಯಲ್ಲಿ ವಿಭಿನ್ನ ಜಯಂತಿಗಳ ಆಚರಣೆಗಳಲ್ಲಿ ರಾಜಕೀಯ ಪಟ್ಟಭದ್ರಹಿತಾಸಕ್ತಿಗಳ ಕೈವಾಡವಿದ್ದರೂ ಅವರೆಲ್ಲರಿಗೂ ಬಸವ ತತ್ವದ ಬೋಧನೆಯ ಆವಶ್ಯಕತೆ ಇದೆ. ಅನುಭವಾತ್ಮಕ ನೆಲೆಯಲ್ಲಿ ತಾತ್ವಿಕ ಸಿದ್ಧಾಂತಗಳನ್ನು ಸಮಾಜಕ್ಕೆ ವೈಚಾರಿಕವಾಗಿ ಕೊಡುಗೆ ನೀಡಿದ ವ್ಯಕ್ತಿತ್ವವನ್ನು ಒಂದು ಸಾಂಸ್ಕೃತಿಕ ರಾಜಕಾರಣದ ಅಡಿಯಲ್ಲಿ ಶಾಲೆಯೊಳಗೆ ಪ್ರತಿಷ್ಠಾಪಿಸಲಾಗಿದೆ.

ಪತ್ರಿಕೆಗಳನ್ನು ಓದುವ ಸಂಸ್ಕೃತಿ ಇಂದು ಶಾಲೆಯಲ್ಲಿ ಅಭಿವೃದ್ಧಿಯಾಗುತ್ತಿದೆ. ಅವುಗಳನ್ನು ತಾತ್ವಿಕ ಚರ್ಚೆಯ ನೆಲೆಗಟ್ಟಿಗೆ ತರಬೇಕಾದ ಆವಶ್ಯಕತೆ ಇದೆ. ಪ್ರತಿ ವಿಷಯಗಳು ಕೂಡ ವಿಶ್ಲೇಷಣೆಯ ವ್ಯಾಪ್ತಿಗೆ ಒಳಪಟ್ಟಾಗ ಮಕ್ಕಳಲ್ಲಿ ವೈಜ್ಞಾನಿಕ, ಹಾಗೂ ವೈಚಾರಿಕ ಮನೋಭಾವನೆಗಳನ್ನು ಬೆಳಸಲು ಸಾಧ್ಯ. ಹರಕೆಯ ಕುರಿಗಳಾಗಿ ಎಲ್ಲವನ್ನು ಒಪ್ಪಿಕೊಂಡು ಹೋಗುವ ದುರ್ಬಲ ಮನಸ್ಥಿತಿಯನ್ನು ಸೃಷ್ಟಿಸುವ ಬದಲಾಗಿ ಪ್ರಶ್ನಿಸುವ ಮನೋಭಾವ, ಚಿಂತನಶೀಲ ಮನಸ್ಥಿಗಳನ್ನು ಹುಟ್ಟುಹಾಕಬೇಕಾದ ಕೆಲಸವಾಗಬೇಕಾಗಿದೆ. ಮಠ ಸಂಸ್ಕೃತಿ ಮತ್ತು ಸನ್ಯಾಸವನ್ನು ಬಸವಣ್ಣ ಮತ್ತು ಯಾವುದೇ ಶರಣರು ಮಾನ್ಯ ಮಾಡಿರಲಿಲ್ಲ. ಆದರೆ ಇಂದು ಅವುಗಳು ಧಾರ್ಮಿಕ, ಸಾಂಸ್ಕೃತಿಕ ಆವರಣದಲ್ಲಿ ರಾಜಕೀಯ ಏಜೆಂಟ್‌ಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಇಂದ್ರಿಯಗಳನ್ನು ನಿಗ್ರಹಿಸಿ ಸನ್ಯಾಸಿಯಾಗಿದ್ದೇವೆ ಎಂದು ಹೇಳುವವರು ಅತ್ಯಾಚಾರ, ಅನಾಚಾರಗಳ ಹೆಸರಿನಲ್ಲಿ ಸಿಕ್ಕಿಹಾಕಿಕೊಂಡಿರುವ ಉದಾಹರಣೆಗಳು ನಮ್ಮ ಕಣ್ಮುಂದೆ ನಲಿದಾಡುತ್ತಿವೆ.

ಕಾಯಕ ತತ್ವಕ್ಕೆ ಒಂದು ಬೆಲೆ ಸಿಗುವುದು ನಾವು ಅದನ್ನು ನಿಷ್ಠೆಯಿಂದ ಮನಸಾಕ್ಷಿಗೆ ದ್ರೋಹ ಬಗೆಯದಂತೆ ಶಿರಸಾವಹಿಸಿ ನಡೆದುಕೊಂಡಾಗ ಮಾತ್ರ. ಅದು 'ಕಾಯಕದಲ್ಲಿ ನಿರತನಾದೊಡೆ' ಎಂದು ಹೇಳುವ ಬಸವ ತತ್ವಕ್ಕೆ ನಾವು ಸಲ್ಲಿಸುವ ನಿಜವಾದ ಗೌರವ. ಕಾಯಕ ಯಾವುದಾದರೇನು? ಮಾಡುವ ಕೆಲಸಕ್ಕೆ ಗೌರವ ಕೊಟ್ಟು ಶ್ರದ್ಧೆಯಿಂದ ಮಾಡಿದಾಗ ಶ್ರಮ ಮೌಲ್ಯವನ್ನು ಎತ್ತಿಹಿಡಿದಂತಾಗುತ್ತದೆ. ಶೈಕ್ಷಣಿಕ ವ್ಯವಸ್ಥೆಯಲ್ಲಿ ಬಸವ ತತ್ವದ ಸಂಪೂರ್ಣ ಬಳಕೆ ಇಂದು ಆಗಬೇಕಾಗಿದೆ. ಅಂದರೆ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬಿತ್ತಲು ಬಸವ ತತ್ವದ ಆಳವನ್ನು ಶೈಕ್ಷಣಿಕ ವ್ಯವಸ್ಥೆಯಲ್ಲಿಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳಬೇಕಾಗಿದೆ.



# Cool Clicks ………!!!!!!!



**Art by –Bhuvan** 6th standard



Azim Premji Foundation

# Please Contact Bayalu Team

| Sl. No. | Name | Mail id |
|---|---|---|
| 1 | Raghavendra Herle G. | raghavendra.herle@azimpremjifoundation.org |
| 2 | Showrish Kudkuli | showrish.kudkuli@azimpremjifoundation.org |
| 3 | Benny Mathews | benny.mathews@azimpremjifoundation.org |
| 4 | Chikkaveeresha S. V. | chikkaveeresha.v@azimpremjifoundation.org |
| 5 | Lakshmidevi | lakshmidevi@azimpremjifoundation.org |
| 6 | Gopalakrishna Induguli | gopalakrishna@azimpremjifoundation.org |
| 7 | Yathiraj Sharma | yathiraj.sharma@azimpremjifoundation.org |
| 8 | Naganand GV | nagananda.gv@azimpremjifoundation.org |
| 9 | Ravi B T | ravi@azimpremjifoundation.org |
| 10 | Niranjan Sravade | niranjan.sarvade@azimpremjifoundation.org |
| 11 | Sudharshan K | sudharshan.k@azimpremjifoundation.org |
| 12 | Shivaji | shivaji.ganpatrao@azimpremjifoundation.org |
| 13 | Lohit | lohitashwa.chamanoor@azimpremjifoundation.org |
| 14 | Giridhar Vaidya | giridhara.vaidya@azimpremjifoundation.org |
| 15 | Muzamimml | muzammil.mahaldar@azimpremjifoundation.org |
| 16 | Shivukumar | shivukumar@azimpremjifoundation.org |
| 17 | Gangadhar.Swamy | gangadhar.swamy@azimpremjifoundation.org |
| 18 | Pradeep Kumar | pradeep.kumar@azimpremjifoundation.org |
| 19 | Swathi Subramanya | swathi.subramanya@azimpremjifoundation.org |
| 20 | Shivakumara Swamy | shivakumara.swamy@azimpremjifoundation.org |
| 21 | Gundappa Katekar | gundappa.katekar@azimpremjifoundation.org |

# Thank you



...a space of our own